# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆ: 1/2020

ಅ.ಸಾ. 08

ದೊ.ಸಾ. 14

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಅಮ್ಮಿನಬಾವಿ |
| ತಂದೆ ಹೆಸರು | : | ಶೇಷಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಹೆಚ್ ಸಿ 617, ಹುಬ್ಬಳ್ಳಿ ಗ್ರಾಮೀಣ ಪೋಲಿಸ್ ಠಾಣೆ |
| ವಾಸಸ್ಥಳ | : | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 30/11/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ:**

2018 ರಲ್ಲಿ ನಾನು ಮುಖ್ಯಪೇದೆಯಾಗಿ ಗರಗ ಪೋಲಿಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆ.

2. ದಿ: 15/02/2018 ರಂದು ನಾನು ಗರಗ ಪೋಲಿಸ್ ಠಾಣೆಯ ಠಾಣಾಧಿಕಾರಿಯ ಪ್ರಭಾರದಲ್ಲಿದ್ದೆ. ಆ ದಿನ ರಾತ್ರಿ 10.00 ಗಂಟೆಗೆ ಹಂಗರಕಿ ಗ್ರಾಮ ಪಂಚಾಯಿತಿಯ ಪಿಡಿಓ., ರವರು ಲಿಖಿತವಾಗಿ ದೂರನ್ನು ಕೊಟ್ಟಿದ್ದರು. ಸದರಿ ದೂರನ್ನು ಆ್ಯಕ್ಸಿಡೆಂಟಲ್ ಫಾಯರ್ 1/2018 ರಲ್ಲಿ ದಾಖಲ್ ಮಾಡಿದ್ದೇನೆ. ಪಿಡಿಓ.,ರವರು ಕೊಟ್ಟ ಸದರಿ ವರದಿಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿಶಾನೆ.ಪಿ.1 ಎಂದು ಗುರ್ತಿಡಸಲಾಗಿದೆ. ಅದನ್ನು ಸ್ವೀಕರಿಸಿದ ಬಗ್ಗೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಯ ಸಹಿಗೆ ನಿಪಿ.1(ಬಿ) ಎಂದು ಗುರ್ತಿಸಲಾಯಿತು.

3. ದಿ: 16/02/2018 ರಂದು ಹಂಗರಕಿ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟೆ. ಇಬ್ಬರು ಪಂಚರಾದ ಚಾಸಾ.2 ಮತ್ತು 3 ರವಿ ಬಡಿಗೇರ ಮತ್ತು ಫಕೀರಪ್ಪ ನವಲಗುಂದ ಇವರನ್ನು ಬರಮಾಡಿಕೊಂಡೆ. ಪ್ರಾಸಾ.2 ರುದ್ರಪ್ಪ ಶಿವಪ್ಪ ಮುರಾರಿ ಇವರು ಘಟನಾ ಸ್ಥಳ ತೋರಿಸಿದ. ಆ

ಎಸ್.ಸಿ. ಸಂಖ್ಯೆ.1/2020

ಅ.ಸಾ. 08

ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿದೆ. ನಾನು ಸ್ಥಳಕ್ಕೆ ಹೋದಾಗ ಜಾಗದಲ್ಲಿ ಕಸ ಗೂಡಿಸಿದ್ದರು. ಸುಟ್ಟ ಫೈಲ್‌ಗಳು ಇದ್ದ ಒಂದು ಡಬ್ಬಿಯನ್ನು ತೋರಿಸಿದರು. ಅದರಲ್ಲಿ ಅರ್ಧ ಮರ್ಧ ಸುಟ್ಟ ಫೈಲ್ ಗಳು ಇದ್ದವು. ಅವುಗಳನ್ನು ನಮ್ಮ ತಾಬಾಕ್ಕೆ ತೆಗೆದುಕೊಂಡೆ. ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 12.00 ರವರೆಗೆ ಬರೆದೆ. ಸದರಿ ಪಂಚನಾಮೆಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಈಗ ಅದನ್ನು ನೋಡುತ್ತಿದ್ದು, ಅದಕ್ಕೆ ನಿಶಾನೆ.ಪಿ.9 ಎಂದು ಗುರ್ತಿಸಲಾಯಿತು. ಅದರಲ್ಲಿ ಸಾಕ್ಷಿ ಸಹಿ ಮಾಡಿರುವುದಿಲ್ಲ. ಜಾಗವನ್ನು ಖಾಲಿಯಾಗಿ ಇಡಲಾಗಿದೆ. ಅದಕ್ಕೆ ಪಂಚರಾದ ರವಿ ಬಡಿಗೇರ ಮತ್ತು ಫಕೀರಪ್ಪ ನವಲಗುಂದ ಕ್ರಮವಾಗಿ ನಿಪಿ.9(ಎ) ಮತ್ತು 9(ಬಿ) ದಲ್ಲಿ ಸಹಿ ಮಾಡಿದ್ದಾರೆ. ಅವುಗಳನ್ನು ತೆಗೆದುಕೊಂಡು ಠಾಣೆಗೆ ಮರಳಿ ಸ್ವತ್ತುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಸದರಿ ಅರೆಸುಟ್ಟ ಫೈಲುಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅವುಗಳನ್ನು ನೋಡುತ್ತಿದ್ದು, ಅವುಗಳಿಗೆ ಈ ಮೊದಲು ಮುಮಾ.1 ಎಂದು ಗುರ್ತಿಸಲಾಗಿದೆ.

4. ದಿಃ 01/03/2018 ರಂದು ನಾನು ಠಾಣೆಯಲ್ಲಿದ್ದಾಗ ಹಂಗರಕಿ ಗ್ರಾಮ ಪಂಚಾಯಿತಿ ಪಿಡಿಓ., ಲಿಖಿತ ಫಿರ್ಯಾದಿಯನ್ನು ಕೊಟ್ಟರು. ಅದನ್ನು ನಮ್ಮ ಠಾಣೆಯ ಪ್ರಕರಣ ಸಂ.46/18 ರಲ್ಲಿ ದಾಖಲಿಸಿಕೊಂಡೆ. ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹೆಚ್ ಸಿ ನಂ.703 ಇವರ ಮುಖಾಂತರ ಕಳುಹಿಸಿಕೊಟ್ಟಿದ್ದೇನೆ. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದಕ್ಕೆ ನಿಪಿ.10 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಡಿಜಿಟಲ್ ಸಹಿಗೆ ನಿಶಾನೆ.ಪಿ.10(ಎ) ಎಂದು ಗುರ್ತಿಸಲಾಯಿತು. ಆ ದಿನ ಪಿಡಿಓ., ಕೊಟ್ಟ ಫಿರ್ಯಾದಿಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿಪಿ.2 ಎಂದು ಗುರ್ತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ. 2(ಬಿ)ಎಂದು ಗುರ್ತಿಸಲಾಯಿತು. ಮುಂದಿನ ತನಿಖೆಯ ಬಗ್ಗೆ ಕಡತವನ್ನು ಠಾಣೆಯ ಪಿ ಎಸ್ ಐ., ಚಾಸಾ.15 ಇವರಿಗೆ ಕೊಟ್ಟಿದ್ದೇನೆ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

5. ದಿಃ 15/02/2018 ರಂದು ಪಿಡಿಓ.,ರವರೊಂದಿಗೆ ಠಾಣೆಗೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಅದನ್ನು ಸ್ವೀಕರಿಸಿದ ಕೂಡಲೇ ನಾನು ಪ್ರಾಥಮಿಕ ತನಿಖೆಯನ್ನು ಮಾಡಿದೆ. ದಿಃ 16/02/2018 ರಂದು ತನಿಖೆಗಾಗಿ ಗ್ರಾಮ ಪಂಚಾಯಿತಿಗೆ ಬರುತ್ತೇನೆ ಎಂದು ಪಿಡಿಓ.,ರವರಿಗೆ

ಎಸ್.ಸಿ. ಸಂಖ್ಯೆ.1/2020

ಅ.ಸಾ. 08

ತಿಳಿಸಿದ್ದೆ. ನಾನು ಹೋದಾಗ ಪಿಡಿಓ.. ಪಂಚಾಯಿತಿಯಲ್ಲಿ ಇರಲಿಲ್ಲ. ಮಹಜರನ್ನು ಆ ದಿನ ನಾನೇ ಬರೆದಿದ್ದೇನೆ. ಮಹಜರನಲ್ಲಿ ದಸ್ತೂರ್ ಎಂದು ಸಹಿ ಮಾಡುವುದನ್ನು ನಾನು ಮರೆತಿದ್ದೇನೆ.

6. ದಿಃ 01/03/2018 ರಂದು ಪಿಡಿಓ.,ರವರೊಂದಿಗೆ ಪೋಲಿಸ್ ಠಾಣೆಗೆ ಯಾರು ಯಾರು ಬಂದಿದ್ದರು ಎಂದು ನಾನು ಗಮನಿಸಲಿಲ್ಲ. ಆದರೆ ಅವರೊಂದಿಗೆ ಕೆಲವು ಜನ ಬಂದಿದ್ದರು. ದೂರು ಕೊಟ್ಟ ನಂತರ ನಾನು ಕಡತವನ್ನು ಮೇಲಾಧಿಕಾರಿಗೆ ತನಿಖೆಗಾಗಿ ಕೊಟ್ಟ ಕಾರಣ ಮುಂದಿನ ತನಿಖೆಯನ್ನು ಮಾಡಿರುವುದಿಲ್ಲ. ದಿಃ 16/02/2018 ರಂದು ನಾನು ಗ್ರಾಮ ಪಂಚಾಯಿತಿಯ ಕಚೇರಿಗೆ ಭೇಟಿ ಕೊಡಲೂ ಇಲ್ಲ ಮತ್ತು ಮಹಜರನ್ನು ತಯಾರಿಸಲೂ ಇಲ್ಲ ಅನ್ನುವುದು ಸರಿಯಲ್ಲ. ಆ ಸಮಯದಲ್ಲಿ ಮುಮಾ.1 ನ್ನು ನಾನು ಅಮಾನತ್ತುಪಡಿಸಿಲ್ಲ ಅನ್ನುವುದು ಸರಿಯಲ್ಲ. ಮುಮಾ.1 ಯಾವ ಫೈಲಿನ ಅರೆಸುಟ್ಟ ದಾಖಲೆ ಎಂದು ನನಗೆ ಕಂಡುಬಂದಿಲ್ಲ. ಪಿಡಿಓ., ಹೇಳಿದ ಪ್ರಕಾರ ಠಾಣೆಯಲ್ಲಿಯೇ ನಿಪಿ.9 ನ್ನು ತಯಾರಿಸಿದ್ದೇನೆ ಅನ್ನುವುದು ಸರಿಯಲ್ಲ.

7. ದಿಃ 16/02/2018 ರಂದು ಪಿಡಿಓ., ಕೊಟ್ಟ ವರದಿಯಲ್ಲಿ ಸತ್ಯಾಂಶವಿಲ್ಲ ಎಂದು ಕಂಡುಬಂದರೂ ಸಹ ನಾನು ಎ.ಎಫ್., ಪ್ರಕರಣ ದಾಖಲ್ ಮಾಡಿದ್ದೇನೆ ಅನ್ನುವುದು ಸರಿಯಲ್ಲ. ದಿಃ 01/03/2018 ರಂದು ಪಿಡಿಓ ಕೊಟ್ಟ ದೂರಿನಲ್ಲಿ ಸತ್ಯಾಂಶವಿಲ್ಲ ಎಂದು ಕಂಡುಬಂದರೂ ಸಹ ನಾನು ಪ್ರಕರಣ ದಾಖಲ್ ಮಾಡಿದ್ದೇನೆ ಅನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

30/11/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.